**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಜಗಳೂರು.**

**ಸಿ.ಸಿ. ನಂಃ 1383/2023**

| **ಪಿರ್ಯಾದುದಾರರು** | ವಿರುದ್ದ | **ಆರೋಪಿ** |
|---|---|---|
| ಜಗಳೂರು ಪೋಲೀಸ್ ಠಾಣೆ. | | ಚೌಡೇಶ ಯಾನೆ ಚೌಡಪ್ಪ ತಂದೆ ಮಡಿವಾಳಪ್ಪ, 23 ವರ್ಷ, ವೃತ್ತಿ: ಕೂಲಿ, ವಾಸಃ ಬಿದರಕೆರೆ ಹೊಸೂರು ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ |

**ದೋಷಾರೋಪಣೆ**

ಶ್ರೀ ಚೇತನ್ ಆರ್. ಬಿ.ಎ.ಎಲ್, ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಜಗಳೂರು ಆದ ನಾನು ಈ ಮೂಲಕ ನಿಮ್ಮ ಮೇಲೆ ಹೊರಿಸಿದ ದೋಷಾರೋಪಣೆ ಏನೆಂದರೆ,

ದಿನಾಂಕ 12/10/2022 ರಂದು ಬೆಳಿಗ್ಗೆ 11ಃ00 ಗಂಟೆಗೆ ಜಗಳೂರು ಪೊಲೀಸ್ ಠಾಣಾ ಸರಹದ್ದಿನ ಬಿದರಕೆರೆ ಗ್ರಾಮದಲ್ಲಿನ ಚಾಸಾ.1 ರವರ ವಾಸವಾಗಿದ್ದ ಮನೆಯ ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ಆರೋಪಿಯಾದ ನೀವು ಕಬ್ಬಿಣದ ಸರಳಿನಿಂದ ಮುರಿದು ಮನೆಯ ಒಳಗೆ ಕಳ್ಳತನ ಮಾಡಲು ಪ್ರವೇಶ ಮಾಡಿರುತ್ತೀರಿ, ಆದ್ದರಿಂದ ನೀವು ಭಾರತಿಯ ದಂಡ ಸಂಹಿತೆ ಕಲಂ 454 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಮನೆಯ ಬೆಡ್ ರೂಂನಲ್ಲಿದ್ದ ಬೀರುವಿನ ಬಾಗಿಲು ತೆಗೆದು ಅದರಲ್ಲಿದ್ದ ಸುಮಾರು 80,000/- ರೂ. ನಗದು ಹಣವನ್ನು ಕಳುವು ಮಾಡಿರುತ್ತೀರಿ, ಆ ಮೂಲಕ ನೀವು ಭಾರತಿಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

ದಿನಾಂಕ: 13/06/2024.

**ಸಿ. ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು,**
**ಜಗಳೂರು.**

**ಆರೋಪಿಯ ಹೇಳಿಕೆ**

ಪ್ರಶ್ನೆ:1 ಃ ಈಗ ಓದಿ ಹೇಳಿದ ನಿಮ್ಮ ಮೇಲಿನ ದೋಷಾರೋಪ ನಿಮಗೆ ತಿಳಿಯಿತೆ?

ಉತ್ತರ ಃ

ಪ್ರಶ್ನೆ:2 ಃ ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?

ಉತ್ತರ ಃ

(ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದ್ದು, ಸದರಿ ಹೇಳಿಕೆ ಆರೋಪಿಯು ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

ದಿನಾಂಕಃ 13/06/2024.

**ಸಿ. ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು,**
**ಜಗಳೂರು.**

Accused present. Charge framed and read over to accused. Accused denied the charge, pleaded not guilty and claimed to be tried. Hence case is posted for prosecution evidence.

Issue summons to C.W.1 to 4.

**Civil Judge & JMFC, Jagalur.**